ಪ್ರಾಣಸಖಿಯ ಮೌಲ್ಯಮಾಪನವೂ ಕಳೆದು ಮುಂದೆ ಬಂದಾಗಿದೆ. ಈಗ ಏನಿದ್ದರೂ 'ಪತ್ರ ಬರೆಯಲಾ ಇಲ್ಲ ಚಿತ್ರ ಬಿಡಿಸಲಾ' ಎಂದು ನಾಯಕ, ಗೆಳತಿಯ ಎದುರಿಗೇ ನಿಂತು ಹಾಡುತ್ತಾನಷ್ಟೆ. ಪತ್ರ ಬರೆಯುವುದು ಎನ್ನುವುದು ಇಂದು ಒಂದು ಆ್ಯಂಟಿಕ್ ಆಪ್ಷನ್ ಆಗಿಯಷ್ಟೇ ಉಳಿದಿದೆ; ಅನಿವಾರ್ಯವಾಗಿಯೋ, ಸಾರ್ವತ್ರಿಕ ಅಭಿವ್ಯಕ್ತಿಯ ಪರಿಕರವಾಗಿಯೋ ಅಲ್ಲ. ಅದರ ಜಾಗವನ್ನೀಗ ಹಲಬಗೆಯ ಸೋಷಿಯಲ್ ಪ್ಲಾಟ್‌ಫಾರಂಗಳು, ಆ್ಯಪ್‌ಗಳು ಆವರಿಸಿವೆ.

## ಇದು ಆ್ಯಪ್‌ಗಳ ಜಮಾನ

ಈ ಬದಲಾವಣೆಯ ಗಡಿ ಯಾವುದು ಎಂದು ಗುರ್ತಿಸುವುದು ಕಷ್ಟ. ಹಾಗೆ ನೋಡಿದರೆ ಪತ್ರವೂ ಒಂದು ಕಾಲಕ್ಕೆ ಆಧುನಿಕ ತಂತ್ರಜ್ಞಾನವೇ ತಾನೆ? ಆದರೆ ಇಂದಿನ ಸೋಷಿಯಲ್ ಮೀಡಿಯಾ ಮತ್ತು ಮೊಬೈಲ್ ಆ್ಯಪ್‌ಗಳ ಕ್ಷಿಪ್ರಕ್ರಾಂತಿ ಜನಪ್ರಿಯತೆಯಲ್ಲಿಯಷ್ಟೇ ಅಲ್ಲ, ಪರಿಣಾಮದಲ್ಲಿಯೂ ಬಹಳ ದೊಡ್ಡದು. ಈ ಹೊಸ ಕಾಲದ ಸಂವಹನ ಪರಿಕರಗಳು 'ಪ್ರೇಮ'ವನ್ನು ಪ್ರೇಮದ ಸ್ವರೂಪವನ್ನೂ ಬದಲಿಸಿವೆಯೇ? ಈ ಪ್ರಶ್ನೆಗೆ ಉತ್ತರಿಸುವುದು ಖಂಡಿತ ಕಷ್ಟ.

2004ರಲ್ಲಿ ಗೂಗಲ್ ಕಂಪನಿ ಪ್ರಾರಂಭಿಸಿದ 'ಆರ್ಕುಟ್', ಸಾಕಷ್ಟು ಜನಪ್ರಿಯಗೊಂಡ ಮೊದಲ ಸೋಷಿಯಲ್ ನೆಟ್‌ವರ್ಕಿಂಗ್ ಪ್ಲಾಟ್‌ಫಾರಂ. ನಂತರ 2012ರಲ್ಲಿ ಇಂದಿನ ಬಹುಜನಪ್ರಿಯ ಸೋಷಿಯಲ್ ನೆಟ್‌ವರ್ಕಿಂಗ್ ಪ್ಲಾಟ್‌ಫಾರಂ ಆಗಿರುವ ಫೇಸ್‌ಬುಕ್ ಸಾರ್ವಜನಿಕರಿಗೆ

# ಮಾಧ್ಯಮವೇ ಪ್ರೀತಿಗೆ ಮಾನದಂಡವಲ್ಲ



ಈಗ ಶರವೇಗದಲ್ಲಿ ತಂತ್ರಜ್ಞಾನ ಅಭಿವೃದ್ಧಿಗೊಳ್ಳುತ್ತಿದೆ. ಚಿಟಿಕೆ ಹೊಡೆಯುವುದರೊಳಗೆ ಬೇಕಾದ ಮಾಹಿತಿ ಅಂಗೈಯಲ್ಲಿ. ಸಿಗದಿದ್ದರೆ ಹೇಳದ ಚಡಪಡಿಕೆ. ಕ್ಷಣಾರ್ಧದಲ್ಲಿ ಎಲ್ಲವೂ ಆಗಲೇಬೇಕು. ಇಂತಹ ಮನಃಸ್ಥಿತಿಯಲ್ಲಿ ಪ್ರೀತಿಯನ್ನೂ ಹೀಗೆ ಪಡೆಯುವ, ಒಲ್ಲೈಸುವ ಹಠಕ್ಕೆ ಬಿದ್ದಿರುವುದು ಅಪಾಯ ಅನಿಸುತ್ತದೆ.

ಯಾರಾದರೂ ಇಷ್ಟ ಆದಲ್ಲಿ ಅವರನ್ನು ಫೇಸ್‌ಬುಕ್ ಅಥವಾ ಇನ್‌ಸ್ಟಾಗ್ರಾಮ್‌ನಲ್ಲಿ ಹುಡುಕಿ, ನಂಬರ್ ಪಡೆದು ಹಾಯ್ ಹಲೋ ಹೇಳುವುದು ಕಷ್ಟದ ಕೆಲಸವೇ ಅಲ್ಲ. ತೊಂದರೆ ಏನಿಲ್ಲ; ಈಗಿನ ಸಮಯದಲ್ಲಿ ನಮಗದು ವರದಾನ ಎಂದೇ ಅಂದುಕೊಳ್ಳೋಣ. ಪ್ರೀತಿಯ ನಿವೇದನೆ, ಅದು ಇದು ಅಂತ ಗಂಟೆಗಟ್ಟಲೆ ಮಾತುಕತೆ. ನಂತರ ವಾಟ್ಸ್ಆ್ಯಪ್‌ನಲ್ಲಿ ಕಳುಹಿಸಿದ ಮೆಸೇಜ್ ನಿಮಿಷದೊಳಗೆ ರಿಪ್ಲೈ ಬಂದಿಲ್ಲ, ವಿಡಿಯೊ ಕಾಲ್‌ಗೆ ಹೆಚ್ಚು ಹೊತ್ತು ಸಿಗಲಿಲ್ಲ, ಐದು ಮಿಸ್ ಕಾಲ್ ನೀಡಿದರೂ ವಾಪಾಸ್ ಮತ್ತೆ ಫೋನ್ ಬಂದಿಲ್ಲ, ಮೊಬೈಲ್‌ನಲ್ಲಿ ಸ್ಕ್ರೀನ್ ಲಾಕ್ ಬೇಕೆ? ಫೇಸ್‌ಬುಕ್‌ನಲ್ಲಿ ಹಾಕಿದ ಫೋಟೊಗೆ ಮೊದಲ ಲೈಕ್ ಸಿಕ್ಕಿಲ್ಲ, ರಿಲೇಷನ್‌ಷಿಪ್ ಸ್ಟೇಟಸ್‌ನಲ್ಲಿ ಇನ್ನೂ ಸಿಂಗಲ್ ಅನ್ನುವುದೇ ಇದೆ! ಇವು ಆಪ್ತ ಹಾಗೂ ಗಾಢ ಪ್ರೀತಿಯ ಮಾನದಂಡಗಳು ಅಲ್ಲವೇ ಅಲ್ಲ.

ವಿಶ್ವಾಸ, ಇನ್ನೊಬ್ಬರಿಗೆ ತೋರುವ ಪ್ರತಿ ಗೌರವ, ಯಾರೂ ಪರಿಪೂರ್ಣರಲ್ಲ ಎಂಬ ತಿಳಿವಳಿಕೆ, ಜೀವನದಲ್ಲಿ ಸಾಧಿಸಲು ಒಬ್ಬರಿಗೊಬ್ಬರು ಕೊಡುವ ಪ್ರೋತ್ಸಾಹ – ಇವೆಲ್ಲವೂ ಕೊನೆಯಿಲ್ಲದ, ಆಯಾಸಗೊಳ್ಳದ ಪ್ರೀತಿಯ ಮಾಪಕಗಳು.

ಪ್ರೀತಿಯಲ್ಲಿ ಸಂವಹನ ಮುಖ್ಯವೇ ವಿನಾ ಅದಕ್ಕೆ ಬೇಕಾದ ಸಾಧನಗಳು ಅಲ್ಲ. ಹಿಂದೆ ಪತ್ರಗಳಿದ್ದವು, ಈಗ ಮೊಬೈಲ್‌ಗಳಿವೆ. ಸಂವಹನಕ್ಕೆ ಬೇಕಾದ ಮಾಧ್ಯಮಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ಹೋಗುತ್ತವೆ. ಇದು ಜಗದ ನಿಯಮ. ಆದರೆ ಬದಲಾಗದೇ ಇರುವುದೆಂದರೆ ನಮ್ಮಮ್ಮ ಸಂಗಾತಿಯಲ್ಲಿ ಕಂಡುಕೊಂಡ ಪ್ರೀತಿಯ ಗೂಡು.

ಸೀಮಾ ಸಮತಲ

